ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಕರಾಉಶಿಪ/20/23ನೇ ಕಾ.ನಿ. ಸಮಿತಿ/2021-22/113 ದಿನಾಂಕ:04.02.2022

ಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಕಾರ್ಯನಿರ್ವಾಹಕ ಸಮಿತಿಯ ಎಲ್ಲಾ ಸದಸ್ಯರುಗಳಿಗೆ

ಮಾನ್ಯರೇ,

**ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು**

*****

ದಿನಾಂಕ:28.01.2022 (ಶುಕ್ರವಾರ) ರಂದು ಮಧ್ಯಾಹ್ನ 12:00 ಗಂಟೆಗೆ ಪ್ರೊ.ಬಿ.ತಿಮ್ಮೇಗೌಡ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಅವಗಾಹನೆಗಾಗಿ ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

(ಪ್ರೊ. ಗೋಪಾಲಕೃಷ್ಣ ಜೋಷಿ)
ಕಾರ್ಯನಿರ್ವಾಹಕ ನಿರ್ದೇಶಕರು

ಅಡಕ: ಮೇಲಿನಂತೆ

**ಪ್ರತಿ ಮಾಹಿತಿಗಾಗಿ:**

1. ಉಪಾಧ್ಯಕ್ಷರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
2. ಕಛೇರಿ ಪ್ರತಿ.

ನಂ. 30, ಪ್ರಸನ್ನಕುಮಾರ ಬ್ಲಾಕ್, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂ : +9180 2234 1395 ವೆಬ್ : www.kshec.karnataka.gov.in

## ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು

**ದಿನಾಂಕ:28.01.2022 ರಂದು ಬೆಳಿಗ್ಗೆ 12.00 ಗಂಟೆಗೆ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 23ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳು.**

**ಉಪಸ್ಥಿತರು:**

| ಕ್ರ.ಸಂ | ಹೆಸರು ಮತ್ತು ಹುದ್ದೆ | ಸದಸ್ಯರು |
|---|---|---|
| 1 | ಪ್ರೊ. ಬಿ. ತಿಮ್ಮೇಗೌಡ<br>ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಅಧ್ಯಕ್ಷರು |
| 2 | ಪ್ರೊ. ಗೋಪಾಲಕೃಷ್ಣ ಜೋಷಿ<br>ಕಾರ್ಯನಿರ್ವಾಹಕ ನಿರ್ದೇಶಕರು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಸದಸ್ಯ ಕಾರ್ಯದರ್ಶಿಗಳು |
| 3 | ಪ್ರೊ. ಗೋಪಾಲ್ ನಾಯಕ್, (ಆನ್-ಲೈನ್ ಮೂಲಕ)<br>ಐ.ಐ.ಎಂ.ಬಿ, ಬೆಂಗಳೂರು | ಸದಸ್ಯರು |
| 4 | ಡಾ॥ ಕರಿಸಿದ್ದಪ್ಪ (ಆನ್-ಲೈನ್ ಮೂಲಕ)<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ<br>ಬೆಳಗಾವಿ | ಸದಸ್ಯರು |
| 5 | ಡಾ॥ ಹೆಚ್.ಎ ರಂಗನಾಥ್ (ಆನ್-ಲೈನ್ ಮೂಲಕ)<br>ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ<br>ಮತ್ತು ಮಾಜಿ ನಿರ್ದೇಶಕರು, NAAC | ಸದಸ್ಯರು |
| 6 | ಡಾ॥ ಜಯಕರ್ ಎಸ್.ಎಮ್ (ಆನ್-ಲೈನ್ ಮೂಲಕ)<br>ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ<br>ವಿಶ್ವವಿದ್ಯಾಲಯ, ಬೆಂಗಳೂರು | ಸದಸ್ಯರು |
| 7 | ಡಾ॥ ಟಿ.ಎನ್ ತಾಂಡವಗೌಡ<br>ಆಡಳಿತಾಧಿಕಾರಿಗಳು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಆಹ್ವಾನಿತರು |
| 8 | ಶ್ರೀ.ಹೆಚ್.ಸಿ. ಜಯಪ್ರಕಾಶ್<br>ಲೆಕ್ಕಾಧಿಕಾರಿಗಳು<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ | ಆಹ್ವಾನಿತರು |

ಪ್ರಾರಂಭದಲ್ಲಿ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದ ಮತ್ತು ಆನ್-ಲೈನ್ ಮುಖಾಂತರ ಹಾಜರಾದ ಎಲ್ಲಾ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ, ಮಾನ್ಯ ಸಭಾಧ್ಯಕ್ಷರನ್ನು ಸಭೆ ನಡೆಸಿಕೊಡಲು ಕೋರಿದರು. ಸಭಾಧ್ಯಕ್ಷರು ಮತ್ತೊಮ್ಮೆ ಎಲ್ಲರಿಗೂ ಹೊಸ ವರ್ಷದ, ಮಕರ ಸಂಕ್ರಾಂತಿ ಮತ್ತು ಗಣರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯಗಳು |
|---|---|
| 1 | **ವಿಷಯ: ದಿನಾಂಕ: 26.03.2021 ರಂದು ನಡೆದ 22ನೇ ಕಾರ್ಯನಿರ್ವಾಹಕ ಸಮಿತಿಯ ನಡವಳಿಗಳನ್ನು ದೃಢೀಕರಿಸುವ ಕುರಿತು.**<br>ದಿನಾಂಕ:26.03.2021 ರಂದು ನಡೆದ 22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ದೃಢೀಕರಿಸಲು ಕಾರ್ಯನಿರ್ವಾಹಕ ಸಮಿತಿ ಸಭೆಗೆ ಸಲ್ಲಿಸಿದೆ.<br>(22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳನ್ನು ಲಗತ್ತಿಸಿದೆ)<br>ನಿರ್ಣಯ:<br>**ದಿನಾಂಕ: 26.03.2021 ರಂದು ನಡೆದ 22ನೇ ಕಾರ್ಯನಿರ್ವಾಹಕ ಸಮಿತಿಯ ನಡವಳಿಗಳಿಗೆ ಯಾವುದೇ ಆಕ್ಷೇಪಣೆಗಳು ಬಂದಿಲ್ಲದಿರುವುದನ್ನು ಗಮನಿಸಿ, ನಡವಳಿಗಳನ್ನು ದೃಢೀಕರಿಸಲಾಯಿತು.** |
| 2 | **ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳು.**<br>ದಿನಾಂಕ:26.03.2021 ರಂದು ನಡೆದ 22ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ನಡವಳಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಮುಂದೆ ಮಂಡಿಸಿದೆ.<br>ನಿರ್ಣಯ:<br>**ಗಮನಿಸಲಾಯಿತು** |
| 3 | **ವಿಷಯ: ಪರಿಷತ್ತಿನ ಹಾಗೂ ರೂಸಾ ಖಾತೆಯ 2020-21 ನೇ ಸಾಲಿನ ಲೆಕ್ಕಪತ್ರಗಳನ್ನು ಅನುಮೋದಿಸುವ ಕುರಿತು**<br>2020-21ನೇ ಸಾಲಿನ ರೂಸಾ ಮತ್ತು ಪರಿಷತ್ತಿನ ಲೆಕ್ಕಪತ್ರಗಳನ್ನು ಮೆ॥ ಎ.ಬಿ ಚಿದಾನಂದ & ಕಂಪನಿ ರವರು, ಸಂಕಲಿಸಿ ಸಿದ್ದಪಡಿಸಿದ್ದು (ಏಪ್ರಿಲ್-2020 ರಿಂದ ಮಾರ್ಚ್-2021 ರವರೆಗೆ) ಈ ಲೆಕ್ಕಪತ್ರಗಳನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.<br>ಈ ಲೆಕ್ಕಪತ್ರಗಳನ್ನು ಆಡಿಟ್ ಮಾಡುವಂತೆ ಮಹಾಲೇಖಪಾಲಕರನ್ನು ಕೋರಬಹುದಾಗಿದೆ.<br>ನಿರ್ಣಯ:<br>**ಪರಿಷತ್ತಿನ ಮತ್ತು ರೂಸಾ ಖಾತೆಯ 2020-21ನೇ ಸಾಲಿನ ಲೆಕ್ಕಪತ್ರಗಳನ್ನು ಸಭೆಯು ವಿವರವಾಗಿ ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು ಮತ್ತು ಈ ಲೆಕ್ಕಪತ್ರಗಳನ್ನು ಮಹಾಲೇಖಪಾಲಕರಿಂದ(AG) ಆಡಿಟ್ ಮಾಡಿಸಲು ಅನುಕೂಲವಾಗುವಂತೆ ಮಹಾಲೇಖಪಾಲಕರಿಗೆ ಪತ್ರ ಬರೆಯಲು ನಿರ್ಣಯಿಸಲಾಯಿತು.** |

| | |
|---|---|
| 4 | ವಿಷಯ: ಪರಿಷತ್ತಿನ 2022-23ನೇ ಸಾಲಿನ ಆಯವ್ಯಯ ಅಂದಾಜು ಪ್ರಸ್ತಾವನೆ ಕುರಿತು<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 2022-23ನೇ ಸಾಲಿನ ಆಯವ್ಯಯ ಅಂದಾಜು ಪ್ರಸ್ತಾವನೆಯನ್ನು ಸರ್ಕಾರಕ್ಕೆ ದಿ:15.12.2021 ರಂದು ಸಲ್ಲಿಸಲಾಗಿದೆ. ಆಯವ್ಯಯ ಅಂದಾಜಿನ ಪ್ರಸ್ತಾವನೆ ಈ ಕೆಳಕಂಡಂತಿದೆ.<br><br>1. ಆಡಳಿತಾತ್ಮಕ ವೆಚ್ಚಗಳಿಗಾಗಿ = 506.80 ಲಕ್ಷಗಳು<br>2. ಹೊಸ ಯೋಜನೆಗಾಗಿ = 865.00 ಲಕ್ಷಗಳು<br><br>ಒಟ್ಟು = 1371.80 ಲಕ್ಷಗಳು<br><br>ಈ ಆಯವ್ಯಯ ಅಂದಾಜಿನ ಪ್ರಸ್ತಾವನೆಗೆ ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆ ಕೋರಿದೆ.<br><br>ನಿರ್ಣಯ:<br><br>**ಸಭಾಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಆಯವ್ಯಯ ಅಂದಾಜುಗಳ ಮುಖ್ಯಾಂಶಗಳನ್ನು ಸಭೆಗೆ ವಿವರಿಸಿದರು. 2021-22ನೇ ಸಾಲಿನಿಂದ ಎನ್.ಇ.ಪಿ-2020 ಜಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಮುಂದಿನ ವರ್ಷದಿಂದ Teacher Education & Technical Education ನಲ್ಲಿ NEP ಜಾರಿಯಾಗಲಿದ್ದು ಪರಿಷತ್ತಿನ ಕಾರ್ಯಚಟುವಟಿಕೆಗಳು ಹೆಚ್ಚಾಗುತ್ತಿರುವುದರಿಂದ ಈಗಿರುವ ಕಟ್ಟಡದ ಮೇಲೆ ಇನ್ನೂ 2-3 ಮಹಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. NEP ಜಾರಿಗೊಳಿಸುವ ಸಂಬಂಧ, ಈಗಾಗಲೇ ಸರ್ಕಾರದಿಂದ ರೂ.2.0 ಕೋಟಿ ಅನುದಾನ ಬಿಡುಗಡೆಯಾಗಿದ್ದು NEP ಅನುಷ್ಠಾನಗೊಳಿಸುವ ಭಾಗವಾಗಿ ಕೈಗೊಂಡಿರುವ ಕಾರ್ಯಚಟುವಟಿಕೆಗಳನ್ನು ಸಭೆಗೆ ವಿವರಿಸಲಾಯಿತು.**<br><br>**ಪ್ರೊ. ಗೋಪಾಲ ನಾಯಕ್ ಅವರು ಮಾತನಾಡಿ, ಇತ್ತೀಚೆಗೆ ವಿಶ್ವವಿದ್ಯಾಲಯಗಳಲ್ಲಿ NIRF Ranking ಹಿನ್ನಡೆಯಾಗಿದೆ. ಆದುದರಿಂದ, ವಿಶ್ವವಿದ್ಯಾಲಯಗಳು ಉನ್ನತ ಶ್ರೇಯಾಂಕ ಗಳಿಸುವಲ್ಲಿ ಉನ್ನತ ಶಿಕ್ಷಣ ಪರಿಷತ್ತು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.**<br><br>**ಸಭಾಧ್ಯಕ್ಷರು ಉತ್ತರಿಸಿ, ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈ ಗೊಳ್ಳುವುದಾಗಿ ತಿಳಿಸಿದರು. ಚರ್ಚೆಯ ನಂತರ,2022-23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಭೆ ಸರ್ವಾನುಮತದಿಂದ ಅನುಮೋದಿಸಿತು.** |

| | |
|---|---|
| 5 | ವಿಷಯ: ಪರಿಷತ್ತಿನ ನೂತನ ಕಟ್ಟಡದ ಸ್ವಚ್ಛತೆ ಮತ್ತು ಉದ್ಯಾನವನದ ನಿರ್ವಹಣೆಯನ್ನು ಹಳೆ ಗುತ್ತಿಗೆ ಸಂಸ್ಥೆಯಿಂದ ನಿರ್ವಹಿಸುವ ಬಗ್ಗೆ<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಟ್ಟಡದ ಸ್ವಚ್ಛತೆ ಮತ್ತು ಉದ್ಯಾನವನದ ನಿರ್ವಹಣೆಯನ್ನು ಈಗಾಗಲೇ ಕಳೆದ ಒಂದು ವರ್ಷದಿಂದ ನಿರ್ವಹಿಸುತ್ತಿರುವ ಗುತ್ತಿಗೆ ಸಂಸ್ಥೆಯಾದ ಮೆ॥ ವಿನಾಯಕ ಎಂಟರ್‌ಪ್ರೈಸಸ್ ರವರು ದಿ:01.07.2021 ರಂದು ಈ ಕಛೇರಿಗೆ ಪತ್ರ ಬರೆದು, ಪರಿಷತ್ತಿನ ಕಟ್ಟಡದ ಸ್ವಚ್ಛತೆ ನಿರ್ವಹಣೆ ಮತ್ತು ಉದ್ಯಾನವನದ ನಿರ್ವಹಣೆಯನ್ನು ಹಳೆಯ ಟೆಂಡರ್ ದರದಲ್ಲಿಯೇ ಮುಂದುವರೆಸಿಕೊಂಡು ಹೋಗಲು ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ.<br><br>ಪರಿಷತ್ತಿನ ಕಟ್ಟಡದ ಸ್ವಚ್ಛತೆ ಮತ್ತು ಉದ್ಯಾನವನದ ನಿರ್ವಹಣೆಯ ಕೆಲಸವನ್ನು, ಟೆಂಡರ್ ಆಧಾರದ ಮೇಲೆ ಕಡಿಮೆ ದರ ನಮೂದಿಸಿದ್ದ ಮೆ॥ ವಿನಾಯಕ ಎಂಟರ್‌ಪ್ರೈಸಸ್ ಇವರಿಗೆ ಗುತ್ತಿಗೆಯನ್ನು, ದಿನಾಂಕ:01.06.2020 ರಿಂದ 30.06.2021 ರವರೆಗೆ ಗುತ್ತಿಗೆ ಮೊತ್ತ ರೂ.15,50,000/- ಗಳಿಗೆ ವಹಿಸಲಾಗಿತ್ತು. ಈ ಗುತ್ತಿಗೆ ಅವಧಿಯು ದಿ:30.06.2021ಕ್ಕೆ ಮುಕ್ತಾಯವಾಗಿದ್ದು, ಈ ಕೆಲಸವನ್ನು ಪುನ: ಟೆಂಡರ್ ಕರೆದು ಕಾರ್ಯನಿರ್ವಹಿಸುವುದರಿಂದ, ಹೆಚ್ಚಿನ ದರ ನಮೂದಿಸುವ ಸಾಧ್ಯತೆ ಇದೆ ಮತ್ತು ಅಡ್ವರ್ಟೈಸಿಂಗ್ ಚಾರ್ಜ್‌ಸ್ ಹಾಗೂ ಇನ್ನಿತರೇ ವೆಚ್ಚಗಳು ಅನಗತ್ಯವಾಗಿ ಪರಿಷತ್ತಿನ ಅನುದಾನದ ಮೇಲೆ ಹೊರೆಯಾಗುವುದರಿಂದ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಸಂಸ್ಥೆಯು ಪರಿಷತ್ತಿನ ಕಟ್ಟಡವನ್ನು ಮತ್ತು ಉದ್ಯಾನವನದ ನಿರ್ವಹಣೆಯನ್ನು ಸಮರ್ಪಕವಾಗಿ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ಮಾಡಿಕೊಂಡು ಬರುತ್ತಿರುವುದರಿಂದ, ಈ ಗುತ್ತಿಗೆ ಸಂಸ್ಥೆಯನ್ನು ಹಳೆ ಟೆಂಡರ್ ದರದಲ್ಲಿಯೇ ಮುಂದುವರೆಸುವುದು ಸೂಕ್ತ ಎಂದು ಅಭಿಪ್ರಾಯ ಪಡಲಾಗಿದೆ.<br><br>ಆದ್ದರಿಂದ, ಮೆ॥ ವಿನಾಯಕ ಎಂಟರ್‌ಪ್ರೈಸಸ್‌ರವರ ಕೋರಿಕೆಯನ್ನು ಪರಿಗಣಿಸಿ, ಹಳೆಯ ಟೆಂಡರ್ ದರದಲ್ಲಿಯೇ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ದಿ:01.07.2021 ರಿಂದ ದಿ:31.03.2022 ರವರೆಗೆ ಮುಂದುವರೆಸಲು, ತದನಂತರ, ಅಂದರೆ ದಿ:01.04.2022 ರಿಂದ ಹೊಸದಾಗಿ ಟೆಂಡರ್ ಕರೆದು ಈ ಕೆಲಸದ ಗುತ್ತಿಗೆಯನ್ನು ವಹಿಸಲು ಅನುಮೋದನೆ ಕೋರಿ ಕಾರ್ಯನಿರ್ವಾಹಕ ಸಮಿತಿ ಸಭೆಗೆ ಸಲ್ಲಿಸಿದೆ.<br><br>ನಿರ್ಣಯ:<br><br>**ಮೇಲ್ಕಂಡ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ನಂತರ ಮೆ॥ ವಿನಾಯಕ ಎಂಟರ್‌ಪ್ರೈಸಸ್‌ರವರ ಗುತ್ತಿಗೆ ಅವಧಿಯನ್ನು ದಿ:01.07.2021 ರಿಂದ 31.03.2022 ರವರೆಗೆ ಹಳೆ ದರದಲ್ಲಿಯೇ ಮುಂದುವರೆಸಲು ಮತ್ತು ಹೊಸ ಟೆಂಡರ್ ಕರೆದು ದಿ:01.04.2022 ರಿಂದ ಗುತ್ತಿಗೆ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಸಭೆ ಸರ್ವಾನುಮತದಿಂದ ಅನುಮೋದಿಸಿತು.** |

| | |
|---|---|
| 6 | ವಿಷಯ: ಪರಿಷತ್ತಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಬಗ್ಗೆ<br><br>ಪರಿಷತ್ತಿಗೆ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಪ್ರಸ್ತಾವನೆಯನ್ನು 18ನೇ ಕಾರ್ಯನಿರ್ವಾಹಕ ಸಮಿತಿ ಸಭೆ ವಿಷಯ ಸಂಖ್ಯೆ:(5) ರಲ್ಲಿ ನಿರ್ಣಯಿಸಿದಂತೆ ಮತ್ತು 21ನೇ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿದಂತೆ ಶ್ರೀ ಬಾಲಾಜಿ ಸೆಕ್ಯೂರಿಟಿ ಕನ್ಸಲ್‌ಟೆಂಟ್ ಏಜೆನ್ಸಿಯವರಿಗೆ, ಈ ಕಛೇರಿ ಆದೇಶ ಸಂಖ್ಯೆ: ಕರಾಉಶಿಪ/06/ಸೆಕ್ಯೂರಿಟಿ ಗಾರ್ಡ್/2019–20/496 ದಿನಾಂಕ:30.07.2019 ರಲ್ಲಿ ದಿನಾಂಕ:01.08.2019 ರಿಂದ 31.07.2021 ರವರೆಗೆ 2 ಭದ್ರತಾ ಸಿಬ್ಬಂದಿಗಳಿಗೆ ಮಾಹೆಗೆ ರೂ.30,000/– ಗಳಂತೆ ವೇತನ ನಿಗದಿಪಡಿಸಿ ಆದೇಶ ನೀಡಲಾಗಿತ್ತು.<br><br>ನಂತರ, ಕಾರ್ಯನಿರ್ವಾಹಕ ನಿರ್ದೇಶಕರ ಸೂಚನೆ ಮೇರೆಗೆ ಕಛೇರಿಯ ಭದ್ರತಾ ದೃಷ್ಟಿಯಿಂದ ರಾತ್ರಿ ವೇಳೆಗೆ ಇನ್ನೊರ್ವ ಭದ್ರತಾ ಸಿಬ್ಬಂದಿಯನ್ನು ದಿ:01.07.2020 ರಿಂದ ನಿಯೋಜಿಸಿಕೊಳ್ಳಲಾಗಿದೆ. ಪ್ರಸ್ತುತ ಒಟ್ಟು 03 ಜನ ಸಿಬ್ಬಂದಿಗಳು ಪ್ರತಿ ದಿನ 03 ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬೆಳಿಗ್ಗೆ 6 ರಿಂದ 2 ಗಂಟೆವರೆಗೆ, ಮಧ್ಯಾಹ್ನ 2 ರಿಂದ ರಾತ್ರಿ 10 ಗಂಟೆವರೆಗೆ ಮತ್ತು ರಾತ್ರಿ 10.00 ರಿಂದ ಬೆಳಿಗ್ಗೆ 6.00 ಗಂಟೆವರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಾರಣದಿಂದ, ದಿನಾಂಕ:30.07.2019 ರ ಗುತ್ತಿಗೆ ಆದೇಶದಲ್ಲಿ ಇಬ್ಬರನ್ನು ನಿಯೋಜಿಸಲು ತಿಳಿಸಿದ್ದು, ತದನಂತರ 01.07.2020 ರಿಂದ ರಾತ್ರಿ ಪಾಳಿಗೆ ಓರ್ವ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.<br><br>ಮುಂದುವರೆದು, ಶ್ರೀ ಬಾಲಾಜಿ ಸೆಕ್ಯೂರಿಟಿ ಕನ್ಸಲ್‌ಟೆಂಟ್ ಏಜೆನ್ಸಿಯವರು ದಿನಾಂಕ:29.07.2021 ರಂದು ಪರಿಷತ್ತಿಗೆ ಪತ್ರ ಬರೆದು, ಹಳೆ ದರದಲ್ಲಿಯೇ ಭದ್ರತಾ ಸಿಬ್ಬಂದಿಯನ್ನು ಒದಗಿಸಲು ಒಪ್ಪಿಕೊಂಡಿರುವುದರಿಂದ, ಈ ಸಂಸ್ಥೆಯ ಗುತ್ತಿಗೆ ಅವಧಿಯನ್ನು ದಿ:01.08.2021 ರಿಂದ 31.03.2022 ರವರೆಗೆ ಮುಂದುವರೆಸಲು, ತದನಂತರ, ಕೊಟೇಷನ್ ಆಧಾರದ ಮೇಲೆ ಈ ಕೆಲಸದ ಗುತ್ತಿಗೆಯನ್ನು ನಿರ್ವಹಿಸಲು ಕಾರ್ಯನಿರ್ವಾಹಕ ಸಮಿತಿ ಸಭೆಗೆ ಸಲ್ಲಿಸಿದೆ.<br><br>ನಿರ್ಣಯ:<br>**ಮೇಲ್ಕಂಡ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ನಂತರ, ಶ್ರೀ ಬಾಲಾಜಿ ಸೆಕ್ಯೂರಿಟಿ ಕನ್ಸಲ್‌ಟೆಂಟ್ಸ್ ಇವರ ಗುತ್ತಿಗೆ ಅವಧಿಯನ್ನು ಹಳೆ ದರದಲ್ಲಿಯೇ ದಿ:01.08.2021 ರಿಂದ 31.03.2022 ರವರೆಗೆ ಮುಂದುವರೆಸಲು, ನಂತರ ದಿ:01.04.2022 ರಿಂದ ಕೊಟೇಷನ್ ಆಧಾರದ ಮೇಲೆ ಗುತ್ತಿಗೆ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಸರ್ವಾನುಮತದಿಂದ ಅನುಮೋದಿಸಿತು** |

| | |
|---|---|
| 7 | ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ವೇತನ ಪರಿಷ್ಕರಣೆ ಬಗ್ಗೆ.<br><br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಈ ಕಛೇರಿಗೆ ದಿನಾಂಕ:07.01.2021 ರಂದು ಮನವಿ ಪತ್ರ ಸಲ್ಲಿಸಿ, ದಿನೇ ದಿನೇ ಏರುತ್ತಿರುವ ದಿನನಿತ್ಯದ ಬೆಲೆಗಳ ಏರಿಕೆ, ಪ್ರಯಾಣ ದರಗಳು ಹೆಚ್ಚಾಗುತ್ತಿರುವ ಕಾರಣಗಳಿಂದಾಗಿ ಜೀವನ ನಿರ್ವಹಣೆಗಾಗಿ ವೇತನವನ್ನು ಪ್ರತಿ ವರ್ಷದಂತೆ ಈ ವರ್ಷವು ಸಹ ಹೆಚ್ಚಿಸುವಂತೆ ಮನವಿ ಮಾಡಿರುತ್ತಾರೆ.<br><br>ದಿನಾಂಕ:10.06.2020 ರಂದು ನಡೆದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 20ನೇ ಕಾರ್ಯನಿರ್ವಾಹಕ ಸಮಿತಿ ಸಭೆಯ ವಿಷಯ ಸಂಖ್ಯೆ (18) ರಲ್ಲಿ ದಿನಾಂಕ:01.01.2020 ರಿಂದ ಜಾರಿಗೆ ಬರುವಂತೆ ಹೊರಗುತ್ತಿಗೆ ನೌಕರರ ವೇತನದಲ್ಲಿ ಶೇ.10% ರಷ್ಟು ಹೆಚ್ಚಿಸಿ ಅನುಮೋದಿಸಲಾಗಿದೆ. ತದ ನಂತರದಲ್ಲಿ ಕೋವಿಡ್–19ರ ಕಾರಣಗಳಿಂದಾಗಿ ವೇತನವನ್ನು ಹೆಚ್ಚಿಸಲಾಗಿರಲಿಲ್ಲ.<br><br>ರಾಜ್ಯ ಸರ್ಕಾರವು ತನ್ನ ನೌಕರರಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 18ಎಸ್‌ಆರ್‌ಪಿ2021, ದಿ:26.07.2021 ರಲ್ಲಿ ಶೇ.10.25% ರಷ್ಟು ಹಾಗೂ ಆದೇಶ ಸಂಖ್ಯೆ: ಎಫ್‌ಡಿ 30ಎಸ್‌ಆರ್‌ಪಿ 2021 ದಿ:27.10.2021 ರಲ್ಲಿ ಶೇ.3.0% ರಷ್ಟು ನೀಡಿದ ಹೆಚ್ಚಳದಿಂದಾಗಿ ಒಟ್ಟು ಶೇ.13.25% ರಷ್ಟು ತುಟ್ಟಿಭತ್ಯೆಯನ್ನು ದಿನಾಂಕ:01.07.2021 ರಿಂದ ಜಾರಿಗೆ ಬರುವಂತೆ ಹೆಚ್ಚಳ ಮಾಡಿದೆ.<br><br>ಈ ಮೇಲ್ಕಂಡ ಪ್ರಸ್ತಾವನೆಯಂತೆ ಹಾಗೂ ಹೊರಗುತ್ತಿಗೆ ನೌಕರರ ಮನವಿಯಲ್ಲಿ ಕೋರಿರುವ ಕಾರಣಗಳಿಂದಾಗಿ ದಿ:01.07.2021 ರಿಂದ ಜಾರಿಗೆ ಬರುವಂತೆ, ಶೇ.13.25% ರಷ್ಟು ವೇತನವನ್ನು ಪರಿಷತ್ತಿನ ಕೆಳಕಂಡ ನೌಕರರಿಗೆ ಹೆಚ್ಚಿಸಲು ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆ ಕೋರಿ ಮಂಡಿಸಿದೆ. ಸರ್ಕಾರದ ಪತ್ರ ಸಂಖ್ಯೆ: ಇಡಿ82ಯುಆರ್‌ಸಿ 2021 ದಿ:02.08.2021 ರ ಪ್ರಕಾರ ದಿ:01.04.2022 ರಿಂದ ಹೊಸ ಗುತ್ತಿಗೆ ಸಂಸ್ಥೆಯನ್ನು ಟೆಂಡರ್ ಮೂಲಕ ನೇಮಕ ಮಾಡಿಕೊಳ್ಳಲು ಕಾರ್ಯನಿರ್ವಾಹಕ ಸಮಿತಿಯ ಅನುಮೋದನೆ ಕೋರಿದೆ. |

| Sl. No | Name of Employee | Designation | Date of Entry into service | Basic Pay In Rs. | 10% hike on Basic In Rs. | DA 13.25% hike on Basic Rs. |
|---|---|---|---|---|---|---|
| 1 | Basavaraj V. | Programmer | 11.05.2015 | 31900 | 3190 | 4227 |
| 2 | E. Vijayalakshmi | FDA | 10.12.2009 | 22000 | 2200 | 2915 |
| 3 | Nalinakshi S. | FDA | 12.04.2016 | 19200 | 1920 | 2544 |
| 4 | Kiran Kumar V M. | DEO | 02.06.2010 | 22000 | 2200 | 2915 |
| 5 | Poornima R. | DEO | 02.03.2020 | 16000 | 1600 | 2120 |
| 6 | Sharath Babu N. | SDA | 10.12.2009 | 21200 | 2120 | 2809 |
| 7 | Sandhya M.C | SDA | 01.01.2017 | 15700 | 1570 | 2080 |
| 8 | Manjunath K L | Attender | 23.09.2010 | 17600 | 1760 | 2332 |
| 9 | Devaraj C M | Attender | 26.05.2011 | 17600 | 1760 | 2332 |
| 10 | Babusha D Budri | Attender | 04.03.2015 | 15300 | 1530 | 2027 |
| 11 | Nikhil D. | Attender | 25.05.2015 | 15300 | 1530 | 2027 |
| 12 | Sangappa B. A | Attender | 05.05.2017 | 15300 | 1530 | 2027 |
| 13 | Ashok V. | Attender | 01.03.2018 | 13700 | 1370 | 1815 |
| 14 | Raghavendra N.G | Driver | 25.07.2016 | 16400 | 1640 | 2173 |

<u>ನಿರ್ಣಯ:</u>

ಪ್ರೊ. ಹೆಚ್.ಎ. ರಂಗನಾಥ್ ಅವರು ಮಾತನಾಡಿ, ಪರಿಷತ್ತಿನಲ್ಲಿ ಹಲವಾರು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಖಾಯಂಗೊಳಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಪರಿಷತ್ತು, ಪ್ರಾರಂಭವಾಗಿ ಒಂದು ದಶಕ ಕಳೆದರೂ ಇನ್ನೂ ಖಾಯಂ ಸಿಬ್ಬಂದಿ ಇಲ್ಲದಿರುವುದು ಸರಿಯಾದ ಕ್ರಮವಲ್ಲ. ಪರಿಷತ್ತನ್ನು ಸಂಪೂರ್ಣ ಸ್ವಾಯತ್ತ ಸಂಸ್ಥೆಯನ್ನಾಗಿ ಮಾರ್ಪಡಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಸಮಲೋಚಿಸಿ ಕ್ರಮ ಜರುಗಿಸಲು ಸಭಾಧ್ಯಕ್ಷರನ್ನು ಕೋರಿದರು.

ಪ್ರೊ. ಗೋಪಾಲ್ ನಾಯಕ್ ಅವರು ಮಾತನಾಡಿ ಪರಿಷತ್ತಿನಲ್ಲಿ ಹೆಚ್ಚಿನ ಸಂಖ್ಯೆಯ **Attenders** ಇರುವುದನ್ನು ಗಮನಿಸಿ, ಇವರಿಗೆ ವಿವಿಧ ಕೌಶಲ್ಯಗಳ ತರಬೇತಿ ನೀಡುವುದರ ಮೂಲಕ ಹೆಚ್ಚಿನ ಜವಾಬ್ದಾರಿಗಳನ್ನು ನೀಡಿ ಮೇಲ್ದರ್ಜೆಗೆ ಏರಿಸಬಹುದು ಎಂದು ತಿಳಿಸಿದರು. ಈ ಬಗ್ಗೆ ಈಗಾಗಲೇ ಮಾಡಿರುವ ಪ್ರಯತ್ನಗಳನ್ನು ವಿವರಿಸಿ ಅದನ್ನು ಮುಂದುವರೆಸುವುದಾಗಿ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದರು.

ಚರ್ಚೆಯ ನಂತರ, ಪರಿಷತ್ತಿನಲ್ಲಿ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ 14 ಜನ ನೌಕರರಿಗೆ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರ ಆಪ್ತ ಸಹಾಯಕರಿಗೆ ಮತ್ತು ವಾಹನ ಚಾಲಕರಿಗೆ ದಿನಾಂಕ:01.07.2021 ರಿಂದ ಜಾರಿಗೆ ಬರುವಂತೆ ಶೇಕಡ.13.25 ರಷ್ಟು ವೇತನವನ್ನು ಹೆಚ್ಚಿಸಲು ಸಭೆ ಅನುಮೋದನೆ ನೀಡಿತು ಹಾಗೂ ದಿನಾಂಕ:02.08.2021 ರ ಸರ್ಕಾರದ ಪತ್ರದನುಸಾರ ದಿನಾಂಕ: 01.04.2022 ರಿಂದ ಹೊಸ ಗುತ್ತಿಗೆ ಸಂಸ್ಥೆಯನ್ನು ಟೆಂಡರ್ ಮೂಲಕ ನೇಮಕ ಮಾಡಿಕೊಳ್ಳಲು ಸಭೆ ಅನುಮೋದಿಸಿತು.

| | |
|---|---|
| 8 | **ವಿಷಯ: ರೂಸಾ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಲ್ಲಿಸಿರುವ ಮನವಿ ಕುರಿತು**<br><br>ಕಾಲೇಜು ಶಿಕ್ಷಣ ಇಲಾಖೆ, ರೂಸಾ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕು॥ ರಮ್ಯ ಬಿ.ಸಿ ಜೂನಿಯರ್ ಪ್ರೊಗ್ರಾಮರ್ ಹಾಗೂ ಶ್ರೀಮತಿ ಲಕ್ಷ್ಮೀದೇವಿ ಜಿ.ಎಸ್ ಡಾಟ ಎಂಟ್ರಿ ಆಪರೇಟರ್ ಇವರುಗಳ ಮಾಸಿಕ ವೇತನವನ್ನು ಹೆಚ್ಚಿಸುವಂತೆ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು (ಪತ್ರ ಸಂಖ್ಯೆ: ಕಾಶಿಇ/09/ಕರಾಉಶಿಪ ಲೆಟರ್ಸ್/ರೂಸಾ/2016-17) ದಿನಾಂಕ:02.08.2021 ರಂದು ಪರಿಷತ್ತಿಗೆ ಪತ್ರ ಬರೆದು, ಸದರಿ ಸಿಬ್ಬಂದಿಯವರ ಕಾರ್ಯದಕ್ಷತೆ, ಅವಶ್ಯಕತೆ ಮತ್ತು ಲಭ್ಯತೆಗಳ ಬಗ್ಗೆ ಸಮರ್ಥನೆಯನ್ನು ನೀಡಿರುತ್ತಾರೆ. ಪ್ರಸ್ತುತ ರೂಸಾ 1.0 ಮತ್ತು 2.0 ರಡಿ ಆಯ್ಕೆಯಾದ ಒಟ್ಟು 120 ಕಾಲೇಜುಗಳ ಕಡತ ನಿರ್ವಹಣೆ ಮಾಡಲಾಗುತ್ತಿದ್ದು, ವಿಷಯ ನಿರ್ವಾಹಕರು ಇರುವುದಿಲ್ಲ. ಸದರಿ ಕಡತಗಳಿಗೆ ಸಂಬಂಧಪಟ್ಟ ಎಲ್ಲ ಪತ್ರ ವ್ಯವಹಾರಗಳು ಇ-ಆಫೀಸ್ ಕಡತ, ಅನುದಾನ ಬಿಡುಗಡೆ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡುವ ಕಾರ್ಯವನ್ನು ಡಾಟ ಎಂಟ್ರಿ ಆಪರೇಟರ್‌ಗಳು ನಿರ್ವಹಿಸುತ್ತಿದ್ದಾರೆ. ಅಲ್ಲದೇ, ಜೂನಿಯರ್ ಪ್ರೊಗ್ರಾಮರ್ ರೂಸಾ ವಿಭಾಗದ ತಾಂತ್ರಿಕ ವಿಷಯಗಳಿಗೆ (PPT, monitoring of Google drive) ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು ಸಿದ್ಧಪಡಿಸಲು ನೆರವು, 'ಅವಲೋಕನ ಆಪ್' ಹಾಗೂ SCP/TSP Portal ನಲ್ಲಿ ಅಪ್ಲೋಡ್ ಮಾಡುವುದು ಹಾಗೂ ಕಾಲೇಜುಗಳ ಅನುದಾನದ ವಿವರಗಳನ್ನು ಕಂಪ್ಯೂಟರ್‌ನಲ್ಲಿ update ಮಾಡುವುದು, ಇತ್ಯಾದಿ ಕೆಲಸಗಳನ್ನು ಇಬ್ಬರು ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿ, ಸದರಿ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವಂತೆ ಕೋರಿರುತ್ತಾರೆ.<br><br>ಈ ಹಿನ್ನಲೆಯಲ್ಲಿ, ಮೇಲ್ಕಂಡ ಸಿಬ್ಬಂದಿಗೆ ವೇತನದಲ್ಲಿ ಶೇ.10% ರಷ್ಟು ಹೆಚ್ಚಿಸುವ ಕುರಿತು ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆ ಕೋರಿ ಮಂಡಿಸಿದೆ.<br><br>**<u>ನಿರ್ಣಯ:</u>**<br><br>**ಕಾಲೇಜು ಶಿಕ್ಷಣ ಇಲಾಖೆಯ ರೂಸಾ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕು.ರಮ್ಯ ಬಿ.ಸಿ ಮತ್ತು ಶ್ರೀಮತಿ ಲಕ್ಷ್ಮೀದೇವಿ ಜಿ.ಎಸ್. ಅವರುಗಳಿಗೆ ಜನವರಿ-2022 ರಿಂದ ಜಾರಿಗೆ ಬರುವಂತೆ ಶೇ.10ರಷ್ಟು ವೇತನವನ್ನು ಹೆಚ್ಚಿಸಲು ಸಭೆ ಅನುಮೋದನೆ ನೀಡಿತು.**<br><br>---•--- |

9 ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆದ **RRSPBL-2021** ರ ಕಾರ್ಯಗಾರದ ಕುರಿತು

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ದಿನಾಂಕ:18–19 ಜೂನ್ 2021 ರಂದು ನಡೆದ Virtual Regional Research Symposium on Problem based learning ಕಾರ್ಯಗಾರವನ್ನು ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ. ಈ ಕಾರ್ಯಗಾರಕ್ಕೆ ಕೆಳಕಂಡಂತೆ ಸಂಸ್ಥೆಗಳು ಪ್ರಾಯೋಜಕತ್ವ ನೀಡಿವೆ.

**In Rs.**

| Sl.no | Date of Credit | Name of Institute | Amount Received |
|---|---|---|---|
| 1 | 20.04.2021 | Hyderabad institute of Technology | 50,000/- |
| 2 | 09.06.2021 | Mathworks of India | 2,45,000/- |
| 3 | 14.06.2021 | Registrar, KLE Technological University, Hubli | 50,000/- |
| 4 | 16.06.2021 | Vishvanikethan Trust | 50,000/- |
| 5 | 06.08.2021 | Dassault systems India Pvt ltd | 2,45,000/- |
| **Total** | | | **6,40,000/-** |

ಮೇಲ್ಕಂಡ ಪ್ರಯೋಜತಕ್ವದ ಮೊತ್ತದಲ್ಲಿ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

**In Rs.**

| **Sl.no** | **Payment made to** | **Bill amount** |
|---|---|---|
| 1 | M/s IUCEE Foundation | 1,00,000/- |
| 2 | Honorarium paid to Dr. Amitava mitra | 76,792/- |
| 3 | Designing of multicolor artworks & certificates | 708/- |
| **Total** | | **1,77,500/-** |

ಮೇಲ್ಕಂಡ ಪಟ್ಟಿಯಂತೆ ಪರಿಷತ್ತಿಗೆ ಸ್ವೀಕರಿಸಲಾದ (Sponsorship amount) ರೂ.6,40,000/–ಗಳಲ್ಲಿ ರೂ.1,77,500/– ಗಳನ್ನು ವೆಚ್ಚ ಮಾಡಲಾಗಿದ್ದು, ಬಾಕಿ ಉಳಿದಿರುವ ಮೊತ್ತ ರೂ.4,62,500/–ಗಳು ಮತ್ತು ಪರಿಷತ್ತಿನ ಪಾಲು ರೂ.5,00,000/–ಗಳು ಸೇರಿದಂತೆ ಒಟ್ಟು ರೂ.9,62,500/–ಗಳು ಪರಿಷತ್ತಿನ ಖಾತೆಯಲ್ಲಿದ್ದು ಈ ಮೊತ್ತವನ್ನು ಕೆಳಕಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ನಿರ್ಧರಿಸಿದೆ.

International/National level Faculty Development Program /Conference on Problem Based Learning

ಈ ಮೇಲ್ಕಂಡ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆಗೆ ಸಲ್ಲಿಸಿದೆ.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

| | |
|---|---|
| 10 | **ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ-2020ರ ರಡಿಯಲ್ಲಿ ಕಾರ್ಯನಿರ್ವಹಿಸಲು ಸಮಾಲೋಚಕರನ್ನು ನೇಮಿಸುವ ಕುರಿತು**<br><br>ಸರ್ಕಾರದ ಆದೇಶ ಸಂಖ್ಯೆ:ಇಡಿ 260 ಯುಎನ್ಇ 2019, ದಿನಾಂಕ: 07.08.2021 ಆದೇಶದಲ್ಲಿ ಸೂಚಿಸಿದಂತೆ ಭಾರತ ಸರ್ಕಾರವು ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ 2021-22 ರ ಸಾಲಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸುವಂತೆ ಆದೇಶ ಹೊರಡಿಸಿದೆ.<br><br>ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಅದರ ಅನುಷ್ಠಾನದ ಬಗ್ಗೆ ಉನ್ನತ ಶಿಕ್ಷಣದ ವ್ಯಾಪ್ತಿಯಲ್ಲಿ ಬರುವ ಎಲ್ಲಾ Stake holder ಗಳಲ್ಲಿ ಅರಿವು ಮೂಡಿಸುವುದು, ಸಮೂಹ ಮಾಧ್ಯಮಗಳಲ್ಲಿ ಸಮನ್ವಯ ಸಾಧಿಸುವುದು ಹಾಗೂ ವಿವಿಧ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಬೇಕಾಗಿರುವುದರಿಂದ ಪರಿಷತ್ತಿನ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಲು ಅನುವಾಗುವಂತೆ ಸಮಾಲೋಚಕರೊಬ್ಬರ (Consultant) ಅವಶ್ಯಕತೆಯಿದ್ದು, ಈ ಸಂಬಂಧ ರಾಷ್ಟ್ರೀಯ ಶಿಕ್ಷಣ ನೀತಿ-2020ರಡಿಯಲ್ಲಿ ಕಾರ್ಯನಿರ್ವಹಿಸಲು ಪರಿಷತ್ತಿಗೆ ಒಬ್ಬ ಸೂಕ್ತ ಕೌಶಲ್ಯ ಹಾಗೂ ಅನುಭವವುಳ್ಳ ಸಮಾಲೋಚಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸುವಂತೆ ಮೆ॥ ಕಿಯೋನಿಕ್ಸ್ ಸಂಸ್ಥೆಗೆ ಕೋರಲಾಗಿತ್ತು.<br><br>ಅದರಂತೆ, ಮೆ॥ ಕಿಯೋನಿಕ್ಸ್ ಸಂಸ್ಥೆಯು, ಸಮಾಲೋಚಕರಿಗೆ ಪಾವತಿಸುವ ವೇತನದ ದರಪಟ್ಟಿಯ ಜೊತೆಗೆ ಅಭ್ಯರ್ಥಿಗಳ ಬಯೋಡೇಟಗಳನ್ನು ಸಲ್ಲಿಸಿದ್ದರು. ಸದರಿ ಸಂಸ್ಥೆಯವರು ಸಲ್ಲಿಸಿರುವ ಬಯೋಡೇಟಗಳಲ್ಲಿದ್ದ ಅಭ್ಯರ್ಥಿಗಳನ್ನು ಸಂದರ್ಶಿಸಿ ಶ್ರೀ.ಬಿ.ಎನ್ ಶ್ರೀಧರ್‌ರವರನ್ನು ಸಮಾಲೋಚಕರಾಗಿ ಆಯ್ಕೆ ಮಾಡಲಾಗಿದ್ದು, ಕಿಯೋನಿಕ್ಸ್ ಸಂಸ್ಥೆಯು ಸಲ್ಲಿಸಿರುವ ದರಪಟ್ಟಿಯ ಪ್ರಕಾರ, ಸದರಿ ಸಮಾಲೋಚಕರಿಗೆ ವೇತನ ಪಾವತಿಸಲು, ಸರ್ವಿಸ್ ಚಾರ್ಜ್ ಹಾಗೂ ಜಿ.ಎಸ್.ಟಿ ಸೇರಿ ಪ್ರತಿ ಮಾಹೆಯಲ್ಲಿ ರೂ.1,86,098/- ಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ಪಾವತಿಲಾಗುತ್ತಿದೆ.<br><br>ಆದ್ದರಿಂದ, ಶ್ರೀ ಬಿ.ಎನ್ ಶ್ರೀಧರ್ ರವರನ್ನು ರಾಷ್ಟ್ರೀಯ ಶಿಕ್ಷಣ ನೀತಿಯ ಸಮಾಲೋಚಕರಾಗಿ ಕಿಯೋನಿಕ್ಸ್ ಮುಖಾಂತರ ನೇಮಿಸಿಕೊಂಡಿವುದನ್ನು ಅನುಸಮರ್ಥನೆಗಾಗಿ ಕಾರ್ಯನಿರ್ವಾಹಕ ಸಮಿತಿ ಸಭೆಯ ಮುಂದೆ ಮಂಡಿಸಿದೆ.<br><br>**<u>ನಿರ್ಣಯ:</u>**<br><br>**ಶ್ರೀ ಬಿ.ಎನ್.ಶ್ರೀಧರ್ ರವರನ್ನು, ಕಿಯೋನಿಕ್ಸ್ ಮುಖಾಂತರ ರಾಷ್ಟ್ರೀಯ ಶಿಕ್ಷಣ ನೀತಿಯ ಸಮಾಲೋಚಕರಾಗಿ ನೇಮಿಸಿಕೊಂಡಿರುವುದನ್ನು ಕಾರ್ಯನಿರ್ವಾಹಕ ಸಮಿತಿ ಸಭೆ ಅನುಸಮರ್ಥಿಸಿತು.** |

11

**ವಿಷಯ: ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020 ನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ರೂ.2.0 ಕೋಟಿಗಳ ಅನುದಾನ ನೀಡಿರುವ ಬಗ್ಗೆ**

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ 2021–22ನೇ ಸಾಲಿನ ಉನ್ನತ ಶಿಕ್ಷಣ ಪ್ರವೇಶಾತಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯನ್ನು ಅಂತರಾಷ್ಟ್ರೀಕರಿಸಿದ ಹಾಗೂ ನೂತನ ಶಿಕ್ಷಣ ನೀತಿಯನ್ನು ರೂಪಿಸಿದ ರೂವಾರಿಗಳಿಗೆ ಸನ್ಮಾನ ಕಾರ್ಯಕ್ರಮ ಸಮಾರಂಭವನ್ನು ದಿನಾಂಕ:23.08.2021 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಭಾರತ ಸರ್ಕಾರದ ಮಾನ್ಯ ಉನ್ನತ ಶಿಕ್ಷಣ, ಕೌಶಾಲ್ಯಾಭಿವೃದ್ದಿ ಮತ್ತು ಉದ್ಯಮಶೀಲತೆ ಕೇಂದ್ರ ಸಚಿವರು ಆನ್‌ಲೈನ್ ಮುಖೇನ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಲು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಮೆ॥ ಮಾರ್ಕೆಟಿಂಗ್ ಕಮ್ಯುನಿಕೇಷನ್ ಹಾಗೂ ಅಡ್ವರ್ಟೈಸಿಂಗ್ ಲಿಮಿಟೆಡ್ ರವರಿಗೆ ಸೂಚಿಸಲಾಗಿತ್ತು ಹಾಗೂ ಕಾರ್ಯಕ್ರಮದ ಕುರಿತು ಜಾಹೀರಾತನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕೋರಲಾಗಿತ್ತು.

ಮಾನ್ಯ ಅಧ್ಯಕ್ಷರು ಕರಾಉಶಿಪ ಹಾಗೂ ಉನ್ನತ ಶಿಕ್ಷಣ ಸಚಿವರು ಇವರ ನಿರ್ದೇಶನದಂತೆ ವಿದ್ಯಾರ್ಥಿಗಳು, ಪೋಷಕರು, ಬೋಧಕರು/ಭೋಧಕೇತರರ ವರ್ಗಗಳಲ್ಲಿ National Education Policy-2020 ರ ಕುರಿತು ಜಾಗೃತಿ ಮೂಡಿಸಲು ಮತ್ತು ಉದ್ಭವಿಸುವ ಸಮಸ್ಯೆಗಳ ಬಗ್ಗೆ ಪರಿಹಾರ ಸೂಚಿಸಲು ಸಹಾಯವಾಣಿಯನ್ನು ಸ್ಥಾಪಿಸಬೇಕಾಗಿದ್ದರಿಂದ, ಇದಕ್ಕೆ ಸಂಬಂಧಿಸಿದಂತೆ BSNL ಸಂಸ್ಥೆಯನ್ನು ಸಂಪರ್ಕಿಸಲಾಗಿದ್ದು ಈ ಸಂಸ್ಥೆಯೊಂದಿಗೆ Empaneling ನಲ್ಲಿರುವ M/s Alackrity Consol Pvt Ltd ರವರಿಂದ ಸಹಾಯವಾಣಿಯನ್ನು ಪರಿಷತ್ತಿನಲ್ಲಿ ಸ್ಥಾಪಿಸಲಾಗಿದೆ. ಈ ಸಹಾಯವಾಣಿ ಸಂಖ್ಯೆ: 080-24486666 ಯನ್ನು ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ದಿನಾಂಕ:23.08.2021 ರಂದು ಉದ್ಘಾಟಿಸಿರುತ್ತಾರೆ.

ರಾಜ್ಯ ಸರ್ಕಾರವು ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಕುರಿತು, ಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ಸಾರ್ವಜನಿಕ ಅರಿವು ಮೂಡಿಸುವ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ರೂ.200.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ25ಇಗೌ2021 ದಿ:11.10.2021 ರ ಪ್ರಕಾರ, ಪರಿಷತ್ತಿಗೆ 200.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಮೊತ್ತದಲ್ಲಿ ಈವರೆವಿಗೆ, ಅಂದರೆ ದಿ:31.12.2021 ರವರೆಗೆ ಒಟ್ಟು ರೂ.51,71,493/–ಗಳನ್ನು ಖರ್ಚು ಮಾಡಲಾಗಿದೆ.

ಈ ವಿಷಯವನ್ನು ಕಾರ್ಯನಿರ್ವಾಹಕ ಸಮಿತಿ ಸಭೆಯ ಅವಗಾಹನೆಗೆ ಸಲ್ಲಿಸಿದೆ.

**<u>ನಿರ್ಣಯ:</u> ಗಮನಿಸಲಾಯಿತು.**

—•—

| | |
|---|---|
| 12 | ವಿಷಯ: ರೂಸಾ ಯೋಜನೆಯಡಿಯಲ್ಲಿ ಡಿಸೆಂಬರ್-2021 ರ ಅಂತ್ಯಕ್ಕಿರುವ ಮೊತ್ತ |

In Rs.

| Sl.no | Particulars | Amount |
|---|---|---|
| 1 | Interest from Universities | 5,26,34,305=00 |
| 2 | Amount received from Power plus Account, Universities & Colleges | 128,00,37,929=00 |
| 3 | Interest received from SB A/c | 3,56,09,775=00 |
| 4 | Nrupathunga University | 1,49,56,969=00 |
| 5 | MMER Grants | 3,50,78,000=00 |

ಈ ಮೇಲ್ಕಂಡ ಮೊತ್ತದಲ್ಲಿ ರೂಸಾ ಯೋಜನೆಯಡಿ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳ ಬ್ಯಾಂಕ್ ಖಾತೆಯಿಂದ ಬಂದಂತಹ ಬಡ್ಡಿ ಹಣವನ್ನು ಕೇಂದ್ರ ಸರ್ಕಾರಕ್ಕೆ ಪಾವತಿಸಲು ಮತ್ತು ಉಳಿದ ರೂಸಾ ಅನುದಾನವನ್ನು ಸಂಬಂಧಪಟ್ಟ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೆ ಬಿಡುಗಡೆ ಮಾಡಬೇಕಾಗಿದ್ದು, ಕಾರ್ಯನಿರ್ವಾಹಕ ಸಮಿತಿ ಸಭೆಯ ಅನುಮೋದನೆಗಿಡಲಾಗಿದೆ.

**ನಿರ್ಣಯ:**

ಕಾರ್ಯನಿರ್ವಾಹಕ ನಿರ್ದೇಶಕರು ವಿವರಗಳನ್ನು ಸಭೆಗೆ ವಿವರಿಸಿದರು ನಂತರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

---

| | |
|---|---|
| 13 | ವಿಷಯ: ಪರಿಷತ್ತಿನ ಮತ್ತು ರೂಸಾ ಖಾತೆಯ ಏಪ್ರಿಲ್-2021 ರಿಂದ ಡಿಸೆಂಬರ್-2021 ರವರೆಗಿನ ಸ್ವೀಕೃತಿ ಮತ್ತು ಪಾವತಿಗಳ ವಿವರ |

ಪರಿಷತ್ತಿನ ಮತ್ತು ರೂಸಾ ಖಾತೆಯಲ್ಲಿನ ಏಪ್ರಿಲ್-2021 ರಿಂದ ಡಿಸೆಂಬರ್-2021 ರವರೆಗಿನ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಸಮಿತಿಯ ಅವಗಾಹನೆಗೆ ಸಲ್ಲಿಸಿದೆ (ಪ್ರತಿ ಲಗತ್ತಿಸಿದೆ)

**ನಿರ್ಣಯ:**

ಕಾರ್ಯನಿರ್ವಾಹಕ ನಿರ್ದೇಶಕರು ಏಪ್ರಿಲ್-2021 ರಿಂದ ಡಿಸೆಂಬರ್-2021 ರವರೆಗಿನ ಪರಿಷತ್ತು ಮತ್ತು ರೂಸಾ ಲೆಕ್ಕ ಪತ್ರಗಳ ವಿವರಗಳನ್ನು ಸಭೆಗೆ ವಿವರಿಸಿದರು. ನಂತರ ಸಭೆಯು ವಿವರವಾಗಿ ಪರಿಶೀಲಿಸಿ, ಏಪ್ರಿಲ್-2021 ರಿಂದ ಡಿಸೆಂಬರ್-2021 ರವರೆಗಿನ ಸ್ವೀಕೃತಿ ಮತ್ತು ಪಾವತಿಗಳನ್ನು ಸರ್ವಾನುಮತದಿಂದ ಅನುಮೋದಿಸಿತು.

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು |
|---|---|
| 14 | ಪ್ರೊ. ಹೆಚ್. ಎ. ರಂಗನಾಥ್ ಅವರು ದಿನಾಂಕ:26.01.2022 ರಿಂದ ಇ-ಮೇಲ್ ಮೂಲಕ "Research Grants for Public Universities and Colleges" ಬಗ್ಗೆ ಕಳುಹಿಸಿರುವ ಪತ್ರದ ಬಗ್ಗೆ ಚರ್ಚಿಸಲಾಯಿತು. ಪ್ರೊ. ರಂಗನಾಥ್ ಅವರು ತಮ್ಮ ಪತ್ರದಲ್ಲಿ ಕಳೆದ 2-3 ವರ್ಷಗಳಿಂದ ಯುಜಿಸಿ ವಿಶ್ವವಿದ್ಯಾಲಯಗಳಿಗೆ ನೀಡುತ್ತಿದ್ದ ಸಂಶೋಧನಾ ಅನುದಾನವನ್ನು ನಿಲ್ಲಿಸಿರುವುದರಿಂದ, ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಂಡಿರುವುದು ಆತಂಕದ ವಿಷಯವಾಗಿದೆ. ಉದಾಹರಣೆಗೆ, ಮೈಸೂರು ವಿಶ್ವವಿದ್ಯಾಲಯಕ್ಕೆ 2015 ರಿಂದ 2019 ರ ಅವಧಿಯಲ್ಲಿ 42 Project ಗಳಿಗೆ ಒಟ್ಟು ರೂ.26.00 ಕೋಟಿ ಅನುದಾನ ಬಂದಿತ್ತು. ಆದರೆ, ನಂತರದ ವರ್ಷಗಳಲ್ಲಿ ಯಾವುದೇ ಹೊಸ ಸಂಶೋಧನ Projectಙ ಮಂಜೂರಾಗದೇ ಇರುವುದರಿಂದ ಹಾಗೂ ಹಿರಿಯ ಪ್ರಾಧ್ಯಾಪಕರ ನಿವೃತ್ತಿಯಿಂದಾಗಿ ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಂಡಿವೆ.<br><br>ವಿಶ್ವವಿದ್ಯಾಲಯಗಳಲ್ಲಿ Research Eco-system ಗೆ ತೀವ್ರತರವಾದ ಧಕ್ಕೆ ಉಂಟಾಗಿದೆ, ಹಾಗಾಗಿ ವಿಶ್ವವಿದ್ಯಾಲಯಗಳ ಶ್ರೇಯಾಂಕಗಳು ಕಡಿಮೆಯಾಗಿದೆ. ಹೊಸ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಹೊಸ ಸಂಶೋಧನೆ/ಅನ್ವೇಷಣೆಗಳಿಗೆ ಒತ್ತು ಕೊಡಬೇಕಾಗುತ್ತದೆ. ಆದುದರಿಂದ, ಯುಜಿಸಿ ಮತ್ತು ಇತರೆ ಕೇಂದ್ರ ಸರ್ಕಾರದ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳಿಗೆ ಹೆಚ್ಚಿನ ಅನುದಾನ ನೀಡುವ ಅಗತ್ಯತೆ ಇದೆ ಎಂದು ತಿಳಿಸಿದರು. ಈ ಬಗ್ಗೆ ಪರಿಷತ್ತಿನ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.<br><br>ರಾಜ್ಯ ಮಟ್ಟದಲ್ಲಿ DST ಮತ್ತು VGST ಸಂಸ್ಥೆಗಳು ಅಲ್ಪ ಪ್ರಮಾಣದ ಸಂಶೋಧನಾ Project ಗಳನ್ನು ನೀಡುತ್ತಿದ್ದು, ಇದು ಸಾಕಾಗುತ್ತಿಲ್ಲ ಎಂದರು. ಕೇರಳ ಸರ್ಕಾರ, ವಿಶ್ವವಿದ್ಯಾಲಯಗಳಿಗೆ Post Doctoral Fellowships in Thrust areas ನೀಡುತ್ತಿರುವುದನ್ನು ಹಾಗೂ ಈ ಮೂಲಕ 12 ಉತ್ಕೃಷ್ಟ ಸಂಸ್ಥೆಗಳು (Centre of Excellence) ಅಭಿವೃದ್ಧಿಯಾಗಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ವಿಷಯವನ್ನು ಕರ್ನಾಟಕ ರಾಜ್ಯ ಸರ್ಕಾರದ ಗಮನಕ್ಕೆ ತಂದು, ಉನ್ನತ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಹೆಚ್ಚಿನ ಅನುದಾನ ನೀಡಲು ಆಗ್ರಹಿಸಬೇಕೆಂದು ತಿಳಿಸಿದರು.<br><br>ಪ್ರೊ. ಕರಿಸಿದ್ದಪ್ಪ, ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಪ್ರೊ.ಜಯಕರ್, ಕುಲಪತಿಗಳು, ರಾಜೀವ್ ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಪ್ರೊ. ಗೋಪಾಲ್ ನಾಯಕ್, ಪ್ರಾಧ್ಯಾಪಕರು ಐಐಎಂಬಿ, ಇವರುಗಳು ಪ್ರೊ. ಹೆಚ್.ಎ. ರಂಗನಾಥ್ ಇವರ ಅಭಿಪ್ರಾಯಗಳಿಗೆ ಸಂಪೂರ್ಣವಾಗಿ ಸಹಮತ ವ್ಯಕ್ತಪಡಿಸಿ, ಈ ಬಗ್ಗೆ ಉನ್ನತ ಶಿಕ್ಷಣ ಪರಿಷತ್ತು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಳ್ಳಬೇಕೆಂದು ತಿಳಿಸಿದರು.<br><br>ಸಭಾಧ್ಯಕ್ಷರು ಮಾತನಾಡಿ, ಸದಸ್ಯರ ಅಭಿಪ್ರಾಯಗಳು ಮತ್ತು ಸಲಹೆಗಳು ಸಮಂಜಸವಾಗಿದ್ದು ಈ ಕುರಿತು ರಾಜ್ಯ ಸರ್ಕಾರ, ಯುಜಿಸಿ, ಮತ್ತು ಇತರ ಸಂಬಂಧಪಟ್ಟ ಸಂಸ್ಥೆಗಳ ಗಮನಕ್ಕೆ ತರಲಾಗುವುದು, ಅಲ್ಲದೆ ಹೊಸ ಶಿಕ್ಷಣ ನೀತಿಯಲ್ಲಿ ಸ್ಥಾಪಿಸಲಾಗುವ Karnataka State Innovation and Research Council ಈ ಎಲ್ಲಾ ಅಂಶಗಳಿಗೆ ಪರಿಹಾರವಾಗಬಹುದು ಎಂದು ತಿಳಿಸಿದರು. ಕೇರಳ ರಾಜ್ಯದಂತೆ, ಆಂಧ್ರ ಪ್ರದೇಶ ಸರ್ಕಾರವು ಸಹ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಅಗತ್ಯವಾದ ಅನುದಾನ ಬಿಡುಗಡೆ ಮಾಡುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ಜೊತೆಗೆ ರಾಜೀವ್ ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ವಿಶ್ವೇಶ್ವರಯ್ಯ |

| | |
|---|---|
| | ತಾಂತ್ರಿಕ ವಿಶ್ವವಿದ್ಯಾಲಯಗಳು ತಮ್ಮ ಸಂಪನ್ಮೂಲಗಳಿಂದ ಸಂಶೋಧನೆಗೆ ಹಣಕಾಸು ನೆರವು ನೀಡುತ್ತಿರುವುದನ್ನು ಸಭೆ ಗಮನಿಸಿತು.<br><br>ಸುದೀರ್ಘ ಚರ್ಚೆಯ ನಂತರ, ರಾಜ್ಯ, ಕೇಂದ್ರ ಸರ್ಕಾರ, ಯುಜಿಸಿ ಮತ್ತು ಇತರ ಸಂಸ್ಥೆಗಳು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಉನ್ನತ ಶಿಕ್ಷಣಕ್ಕೆ, ಸಂಶೋಧನೆಗೆ, ಅಂತರ್-ಶಿಸ್ತೀಯ ಸಂಶೋಧನೆಗೆ (Inter - disciplinary research) ಹೆಚ್ಚಿನ ಆದ್ಯತೆ ನೀಡಿ ಅಗತ್ಯ ಅನುದಾನ ನೀಡುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 23ನೇ ಕಾರ್ಯನಿರ್ವಾಹಕ ಸಮಿತಿ ಒತ್ತಾಯಿಸುತ್ತದೆ ಎಂದು ನಿರ್ಣಯ ಕೈಗೊಳ್ಳಲಾಯಿತು. ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.<br><br>ಕೊನೆಯಲ್ಲಿ ಅಧ್ಯಕ್ಷರು, ಸದಸ್ಯರು ನೀಡಿದ ಅಮೂಲ್ಯ ಸಲಹೆಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿ, ಕೊನೆಗೆ ಕಾರ್ಯನಿರ್ವಾಹಕ ನಿರ್ದೇಶಕರು, ಎಲ್ಲರಿಗೂ ವಂದಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

(ಪ್ರೊ. ಗೋಪಾಲಕೃಷ್ಣ ಜೋಷಿ)
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

(ಪ್ರೊ. ಬಿ. ತಿಮ್ಮೇಗೌಡ)
ಉಪಾಧ್ಯಕ್ಷರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್